# ಗಣಪತಿ ಗೊಂಡ

ಹೆಸರು: ಗಣಪತಿ ಗೊಂಡ
ಗ್ರಾಮ: ಹಡೀಲ
ತಾಲೂಕು: ಭಟ್ಕಳ
ಜಿಲ್ಲೆ: ಉತ್ತರ ಕನ್ನಡ
ಮೊ ನಂ:7353580235



- ಗಣಪತಿ ಗೊಂಡ ರವರು ಒಟ್ಟು ಮೂರು ಎಕರೆ ಭೂಮಿಯನ್ನು ಹೊಂದಿದ್ದು ಅದರಲ್ಲಿ ಅವರು ಎರಡು ಎಕರೆಯಲ್ಲಿ ಒಣ ಬೇಸಾಯ, 1 ಎಕರೆಯಲ್ಲಿ ನೀರಾವರಿ ಬೇಸಾಯವನ್ನು ಮಾಡುತ್ತಿದ್ದಾರೆ.
- ಇವರ ಬೇಸಾಯ ಪದ್ದತಿಯಲ್ಲಿ ಸ್ಪಿಂಕರ್ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ ಇವರು ಭತ್ತ, ರಾಗಿ, ಉದ್ದು, ಅಲಸಂಧಿ ಮತ್ತು ತರಕಾರಿಗಳನ್ನು ಬೆಳೆದಿದ್ದಾರೆ.
- ತೋಟಗಾರಿಕೆಯ ವ್ಯವಸಾಯ ಪದ್ದತಿಯನ್ನು ಮಾಡುತ್ತಿದ್ದು ಅದರಲ್ಲಿ ತೆಂಗು, ಅಡಿಕೆ, ಬಾಳೆ ಎಲೆಗಳನ್ನು ಬೆಳೆದಿದ್ದಾರೆ ಅದೇ ರೀತಿಯಾಗಿ ಹೈನುಗಾರಿಕೆನ್ನು ನಿರ್ವಹಿಸುತ್ತಿದ್ದಾರೆ..
- ಅದರ ಜೊತೆಗೆ, ಕೊಟ್ಟಿಗೆ ಗೊಬ್ಬರ, ಮತ್ತು ಎರೆಹುಳು ಗೊಬ್ಬರದ ನಿರ್ವಹಣೆ ಮಾಡುತ್ತಿದ್ದಾರೆ.
- ಇವರು ಬಿ.ಎ ಪದವಿಧರರಾದರು, ಯಾವುದೇ ಕಛೇರಿಯ ಉದ್ಯೋಗಕ್ಕೆ ಹೋಗದೆ ವ್ಯವಸಾಯದ ಕಡೆ ಆಸಕ್ತಿ ಹೊಂದಿದ್ದು, ಇತರರಿಗೂ ಮಾದರಿಯಾಗುವಂತೆ ಕೃಷಿಯನ್ನು ನಿರ್ವಹಣೆ ಮಾಡುತ್ತಿದ್ದಾರೆ.

ಗೀತಾ ಜಯಪ್ರಕಾಶ ನಾಯ್ಕ



ಹೆಸರು:– ಗೀತಾ ಜಯಪ್ರಕಾಶ ನಾಯ್ಕ
ಗ್ರಾಮ:– ಅಕ್ಕಲಕೇರಿ, ಕೋಡ್ಕಣಿ
ತಾಲ್ಲೂಕು:– ಸಿದ್ದಾಪುರ
ಜಿಲ್ಲೆ:– ಉತ್ತರ ಕನ್ನಡ
ಮೊ.ನಂ:– 7259459322

**ವಿಶೇಷ ಸಾಧನೆಗಳು:–**

- ಶ್ರೀಮತಿ ಗೀತಾ ಜಯಪ್ರಕಾಶ ನಾಯ್ಕರವರು 1.20 ಎಕರೆಯನ್ನು ಹೊಂದಿದ್ದು, ಇದರಲ್ಲಿ ಇವರು ಹನಿನೀರಾವರಿ ಹಾಗೂ ಸಿಂಚನ ನೀರಾವರಿಯನ್ನು ಮಾಡುತ್ತಿದ್ದಾರೆ. ಈ ವಿಧಾನದ ಮೂಲಕ ರೇಷ್ಮೆ ಮತ್ತು ಶುಂಠಿ ಬೆಳಯುತ್ತಿದ್ದಾರೆ.
- ಇದರ ಜೊತೆಗೆ ಅಡಿಕೆ, ಕಾಳುಮೆಣಸು, ಭತ್ತ, ಬಾಳೆ ಹಾಗೂ ವಿಳ್ಯದೆಲೆಯನ್ನು ಬೆಳೆದಿದ್ದಾರೆ.
- ಇವರು ಹೈನುಗಾರಿಕೆಯನ್ನು ಸಹ ಮಾಡುತ್ತಿದ್ದಾರೆ.
- ತಮ್ಮ ಜಮೀನಿನಲ್ಲಿ 500 ಅಕೇಶಿಯಾ ಅರಣ್ಯ ಗಿಡಗಳನ್ನು ಬೆಳೆದು ಜೇನು ಸಾಕಾಣಿಕೆಯನ್ನು ಮಾಡಿದ್ದಾರೆ.
- ತಮ್ಮ ವ್ಯವಸಾಯಕ್ಕೆ ಕೊಟ್ಟಿಗೆ ಗೊಬ್ಬರ, ಕೋಳಿ ಗೊಬ್ಬರ, ಎರಹುಳು ಗೊಬ್ಬರವನ್ನು ತಾವೇ ತಯಾರಿಸಿ ಬಳಸುತ್ತಿದ್ದಾರೆ.
- ಶ್ರೀಮತಿ ಗೀತಾರವರು ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯನ್ನು ಹೊಂದಿದ್ದು, ಪುರುಷರಿಗಿಂತ ತಾವೇನು ಕಡಿಮೆ ಇಲ್ಲ, ಮಹಿಳೆಯು ಉತ್ತಮ ಉಳುಮೆ ಮಾಡಿ ಉತ್ತಮ ಬೆಳೆಯನ್ನು ತೆಗೆಯಬಹುದು ಎಂದು ತೋರಿಸಿಕೊಟ್ಟಿದ್ದಾರೆ. ಮಹಿಳೆಯರು ಕೇವಲ ಅಡುಗೆ ಮನೆಗೆ ಸೀಮಿತವಲ್ಲ ಭೂಮಿಯ ಉಳುಮೆಯನ್ನು ಮಾಡಬಹುದು ಎಂದು ಇತರ ಮಹಿಳೆಯರಿಗೂ ಇವರು ಮಾದರಿಯಾಗಿದ್ದಾರೆ.

**ಶ್ರೀಮತಿ ಜಯಮಾಲ**



ಹೆಸರು: ಜಯಮಾಲ
ಗ್ರಾಮ: ಕಾಳಗಿನಕೊಪ್ಪ
ತಾಲೂಕು: ಹಳಿಯಾಳ
ಜಿಲ್ಲೆ: ಉತ್ತರಕನ್ನಡ
ಮೊ ನಂ:7760778131

**ವಿಶೇಷ ಸಾಧನೆಗಳು:-**

- ಶ್ರೀಮತಿ ಜಯಮಾಲ ಐದು ಎಕರೆ ನೀರಾವರಿ ಕೃಷಿ ಜಮೀನನ್ನು ಹೊಂದಿದ್ದು ಇವರು ಭತ್ತ, ತೆಂಗು, ಅಡಿಕೆ, ಬಾಳೆ, ಕಬ್ಬು ತರಕಾರಿಗಳನ್ನು ಬೆಳೆದಿದ್ದಾರೆ.
- ಇವರು ಭತ್ತದಲ್ಲಿ ಬಾಳೆ ತೆಂಗು ಮತ್ತು ಅಡಿಕೆಯಲ್ಲಿ ತರಕಾರಿಗಳನ್ನು ಬೆಳೆದಿದ್ದಾರೆ. ಇವರು ತೋಟಗಾರಿಕೆ ಬೆಳೆ ಹಾಗೂ ಕೃಷಿ ಬೆಳೆಗಳನ್ನು ಬೆಳೆದಿದ್ದಾರೆ.
- ಇವರು ಸಿಂಚನ ನೀರಾವರಿ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ.
- ತೋಟಗಾರಿಕೆ ಕೃಷಿ ಬೆಳೆಗಳಲ್ಲದೆ ಅರಣ್ಯ ಗಿಡಗಳಾದ ಸಾಗುವಾನಿ, ಮತ್ತು ಇತರ ಮರಗಳನ್ನು ಬೆಳೆದಿದ್ದಾರೆ.
- ಅಷ್ಟೇ ಅಲ್ಲದೆ ಕೃಷಿ ಬೇಕಾಗುವ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ, ಕೋಳಿ ಗೊಬ್ಬರ, ಹಸಿರೆಲೆ, ಎರೆಹುಳು ಗೊಬ್ಬರಗಳನ್ನು ತಾವೇ ತಯಾರಿಸುತ್ತಿದ್ದು ಹಾಗೂ ಅಜೋಲಾ ತಯಾರಿಕೆಯೂ ಇದೆ.
- ಇವರು ಕೋಳಿ ಸಾಕಾಣಿಕೆಯಲ್ಲಿ ಗಿರಿ ರಾಜ ಹಾಗೂ ಜವಾರಿ ತಳಿಯ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ.
- ಅದಲ್ಲದೆ ಹೈನುಗಾರಿಕೆಯಲ್ಲಿ ಹಾಲಿನ ಸಂಸ್ಕರಣೆ ಮಾಡಿ ಹಾಲನ್ನು ಮಾರಾಟ ಮಾಡುತ್ತಿದ್ದಾರೆ.

ಶ್ರೀಮತಿ ಜಯಮಾಲ ರವರು ಎಂಟನೇ ತರಗತಿಯ ವಿದಾರ್ಹತೆಯನ್ನು ಹೊಂದಿದ್ದು ಕೃಷಿಯಲ್ಲಿ ಹೆಚ್ಚಿನ ಪ್ರಭುದ್ದತೆಯನ್ನು ಹೊಂದಿದ್ದು ಇತರರಿಗೂ ಮಾದರಿ ಕೃಷಿಕ ಮಹಿಳೆಯಾಗಿ ಸಾದನೆಗೈದಿದ್ದಾರೆ. ಮಹಿಳೆಯರು ಕೇವಲ ಮನೆಕೆಲಸಕ್ಕೆ ಮಾತ್ರ ಸೀಮಿತರಲ್ಲ

**ಜ್ಯೋತಿಬಾ ಮೋಹನ ಪಾಟೀಲ**

ಹೆಸರು: ಜ್ಯೋತಿಬಾ ಮೋಹನ ಪಾಟೀಲ
ಗ್ರಾಮ:  ದಾಂಡೇಲಿ
ತಾಲೂಕು: ಹಳಿಯಾಳ
ಜಿಲ್ಲೆ: ಕಾರವಾರ
ಮೊ ನಂ:9739317101



- ಅಂಜೋಡಿ ಗ್ರಾಮದ ಜ್ಯೋತಿಬಾ ಪಾಟೀಲ ರವರು ಬಿ.ಕಾಂ ಪದವೀಧರರಾಗಿದ್ದು 7.7 ಎಕರೆ ಭೂಮಿಯನ್ನು ಹೊಂದಿರುತ್ತಾರೆ.
- ಬಾಳೆಯಲ್ಲಿ ಹನಿ ನೀರಾವರಿ ಹಾಗೂ ಭತ್ತ, ಹತ್ತಿಯಲ್ಲಿ ಸಿಂಚನ ನೀರಾವರಿ ಅಳವಡಿಸಿರುವ ಇವರು ಇದಲ್ಲದೇ ತರಕಾರಿ, ಕಬ್ಬು, ಮಾವುಗಳನ್ನು ಬೆಳೆಯುತ್ತಿದ್ದಾರೆ.
- ಜೈವಿಕ ಬದುವಾಗಿ ನೇಪಿಯರ್ ಹುಲ್ಲನ್ನು ಬೆಳೆದಿರುವ ಇವರು ಸ್ವದೇಶಿ ಹಾಗೂ ವಿಶ್ವತಳಿ 20 ಆಕಳು, 5 ಎಮ್ಮೆ ಹಾಗೂ 30 ಕೋಳಿಯನ್ನು ಸಹ ಸಾಕಿದ್ದಾರೆ.
- ಜೇನು ಕೃಷಿ, ಎರೆಹುಳು ಗೊಬ್ಬರ ತೊಟ್ಟಿ, ಬಯೋಡೈಜೆಸ್ಟರ್ ಹೊಂದಿದ್ದು, ಕೊಟ್ಟಿಗೆ, ಕೋಳಿ, ಹಸಿರೆಲೆ, ಎರೆಹುಳು ಗೊಬ್ಬರ, ಜೈವಿಕ ಗೊಬ್ಬರ, ಜೈವಿಕ ಪೀಡೆನಾಶಕಗಳನ್ನು ಬಳಸುತ್ತಿದ್ದಾರೆ.
- ಸುತ್ತಲಿನ  ರೈತರು ಇವರ ಅಂತರ ಬೆಳೆ ಪದ್ದತಿ ಬಯೋಡೈಸಿಸ್ಟರ್ ಬಳಕೆಯನ್ನು ಅಳವಡಿಸುತ್ತಿದ್ದು ಅವರಿಗೆಲ್ಲಾ ಮಾದರಿ ಕೃಷಿಕನಾಗಿದ್ದಾನೆ.

## ಶ್ರೀಮತಿ ಲಲಿತಾ ಶಿವಲಿಂಗಗೌಡ ಹಾಳುರು

ಹೆಸರು:– ಲಲಿತಾ ಶಿವಲಿಂಗಗೌಡ ಹಾಳುರು
ಗ್ರಾಮ:– ಕಲಕೊಪ್ಪ
ಹೋಬಳಿ:– ಪಾಳಾ
ತಾಲ್ಲೂಕು:– ಮುಂಡಗೋಡ
ಜಿಲ್ಲೆ:– ಉತ್ತರ ಕನ್ನಡ
ಮೊ.ನಂ:– 7259468010

**ವಿಶೇಷ ಸಾಧನೆಗಳು:–**

- ಶ್ರೀಮತಿ ಲಲಿತಾ ರವರು 6 ಎಕರೆ ಜಮೀನನ್ನು ಹೊಂದಿದ್ದು, ಇವರು ಕೃಷಿ ಪದ್ಧತಿಯಲ್ಲಿ ಕೃಷಿ ಮಾಡುತ್ತಿದ್ದು, ಅದರಲ್ಲಿ ಗುಲಾಬಿ ಗಿಡಗಳನ್ನು ಬೆಳೆಸಿದ್ದಾರೆ.
- ಸಾವಯವ ಗೊಬ್ಬರಗಳಾದ ಎರೆಗೊಬ್ಬರ, ಕಾಂಪೋಷ್ಟ್ ಗೊಬ್ಬರಗಳನ್ನು ಉತ್ಪಾದಿಸುತ್ತಾರೆ.
- ಕೃಷಿ ಇಲಾಖೆಯ ಹೊಸ ತಾಂತ್ರಿಕ ಮಾಹಿತಿಯನ್ನು ಪಡೆದು ಅನನ್ಯ ರೀತಿಯಲ್ಲಿ ಕೃಷಿಯನ್ನು ನಿರ್ವಹಿಸುತ್ತಿದ್ದಾರೆ.
- ಅಷ್ಟೇ ಅಲ್ಲದೇ ನಿರಂತರ ಪತ್ರಿಕೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಕೃಷಿಯಲ್ಲಿ ಅವುಗಳನ್ನು ಅನುಸರಿಸಿದ್ದಾರೆ.
- ಶ್ರೀಮತಿ ಲಲಿತಾರವರು ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯನ್ನು ಹೊಂದಿದ್ದು, ಕೃಷಿಯಲ್ಲಿ ಸಾಧನೆಗೈಯ್ಯಲು ಕೃಷಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ವಿವಿಧ ರೀತಿಯಲ್ಲಿ ಕೃಷಿಯನ್ನು ಮಾಡುತ್ತಿದ್ದಾರೆ.

## ಮಾಲತೇಶ ಪುಟ್ಟಪ್ಪ ಹರಿಜನ




ಹೆಸರು: ಮಾಲತೇಶ ಪುಟ್ಟಪ್ಪ ಹರಿಜನ
ಗ್ರಾಮ: ಗೊಡಗೋಡಿಕೊಪ್ಪ
ತಾಲೂಕು: ಪಾಳ ಮುಂಡಗೋಡ
ಜಿಲ್ಲೆ: ಉತ್ತರಕನ್ನಡ
ಮೊ ನಂ:9731334796

**ವಿಶೇಷ ಸಾಧನೆಗಳು:-**

- ಮಾಲತೇಶ ರವರು ನಾಲ್ಕು ಎಕರೆ ಜಮೀನನ್ನು ಹೊಂದಿದ್ದು ಅದು ನಿರಾವರಿಯಾಗಿದೆ
- ಇವರು ಸಾವಯುವ ಕೃಷಿ ಪದ್ದತಿ ಹಾಗೂ ಸಮಗ್ರ ಕೃಷಿ ಪದ್ದತಿಯನ್ನು ಅಳವಡಿಸಿಕೊಂಡಿದ್ದಾರೆ ಹಾಗೂ ಹೈನುಗಾರಿಕೆ ಕೋಳಿಸಾಕಾಣಿಕೆಯನ್ನು ನಿರ್ವಹಿಸುತ್ತಿದ್ದಾರೆ.
- ತಮ್ಮ ಕೃಷಿಗೆ ಕೊಟ್ಟಿಗೆ ಗೊಬ್ಬರ, ಕೋಳಿ ಗೊಬ್ಬರ ಮತ್ತು ಎರೆಹುಳು ಗೊಬ್ಬರವನ್ನು ತಾವೇ ತಯಾರಿಸಿ ಅದನ್ನು ಕೃಷಿಗೆ ಬಳಸುತ್ತಿದ್ದಾರೆ.
- ಮಾವು, ಅಡಿಕೆ, ಬಾಳೆ, ಮತ್ತು ಅರಗು ಕೃಷಿಯನ್ನು ಹೊಂದಿದ್ದಾರೆ.
- ಇವರು ಅರಗು ಕೃಷಿಯಲ್ಲಿ ಸಾಧನೆ ಮಾಡುವುದರ ಜೊತೆಗೆ ಬೇರೆ 200 ಜನರಿಗೆ ಇದರಿಂದ ಲಾಭವಾಗಿದೆ.
- ಮಾಲತೇಶರವರು ಏಳನೇ ತರಗತಿಯ ವಿದ್ಯಾರ್ಹತೆಯನ್ನು ಹೊಂದಿದ್ದು ಅತಿ ಹೆಚ್ಚು ಓದಿದವರಿಗಿಂತ ಕಡಿಮೆ ವಿದ್ರ್ಯಾಹತೆ ಹೊಂದಿದವರು ಯಾರಿಗಿಂತಲೂ ತಾವುಗಳು ಯಾವುದರಲ್ಲಿಯೂ ಕಡಿಮೆಯಿಲ್ಲವೆಂದು ತೋರಿಸಿಕೊಟ್ಟಿದ್ದಾರೆ. ಸಾಧನೆಗೈಯಲು ಕೇವಲ ವಿದ್ಯಾರ್ಹತೆಯ ಮಾನ್ಯತೆ ಅವಶ್ಯಕವಿಲ್ಲ ಅದು ಅವರವರ ಆಸಕ್ತಿ ಕಾಯಕದ ಮೇಲಿನ ಪ್ರಬುದ್ಧತೆ ಮುಖ್ಯ ಎಂದು ತೋರಿಸಿಕೊಟ್ಟಿದ್ದಾರೆ.

## ಮನೋಹರ ಲಕ್ಷ್ಮಿನಾರಾಯಣ ಹೆಗಡೆ

ಹೆಸರು:- ಮನೋಹರ ಲಕ್ಷ್ಮಿನಾರಾಯಣ ಹೆಗಡೆ
ಗ್ರಾಮ:- ಕೋಡಗದ್ದೆ
ತಾಲ್ಲೂಕು:- ಸಿದ್ದಾಪುರ
ಜಿಲ್ಲೆ:- ಉತ್ತರ ಕನ್ನಡ
ಮೊ.ನಂ:- 9481276660



**ವಿಶೇಷ ಸಾಧನೆಗಳು:-**

- ಮನೋಹರ ಹೆಗಡೆಯವರು 4 ಎಕರೆ ಭೂಮಿಯನ್ನು ಹೊಂದಿದ್ದು, ಅದರಲ್ಲಿ 3 ಎಕರೆ ಒಣಬೇಸಾಯ ಪದ್ಧತಿ, 1 ಎಕರೆ ನೀರಾವರಿ ಪದ್ಧತಿಯನ್ನು ಅಳವಡಿಸಿದ್ದಾರೆ.
- ಇವರು ತಮ್ಮ ಕೃಷಿ ಭೂಮಿಯಲ್ಲಿ ಅಡಿಕೆ, ಕಾಳುಮೆಣಸು, ತೆಂಗು, ಕೋಕೋ, ಕಾಫಿ, ಲವಂಗ, ಜಾಯಿಕಾಯಿ, ಅರಿಶಿಣ, ಶುಂಠಿ, ಬಾಳೆ, ಏಲಕ್ಕಿ ಬೆಳೆಗಳನ್ನು ಬೆಳೆದಿದ್ದಾರೆ.
- ಇವರು ಪ್ರಧಾನ ಬೆಳೆಯಾಗಿ ಅಡಿಕೆಯನ್ನು ಹೆಚ್ಚು ಬೆಳೆಯುತ್ತಾರೆ. ಈ ಎಲ್ಲಾ ಬೆಳೆಗಳ ಜೊತೆಗೆ ಹೈನುಗಾರಿಕೆಯನ್ನೂ ನಿರ್ವಹಿಸುತ್ತಿದ್ದಾರೆ.ಇದಲ್ಲದೇ ಜೇನು ಸಾಕಾಣಿಕೆಯನ್ನು ಮಾಡುತ್ತಿದ್ದು, ಇದರ ಮೂಲಕಶೇ.15 ಅಧಿಕ ಇಳುವರಿಯನ್ನು ತೆಗೆಯುತ್ತಿದ್ದಾರೆ.
- ತಮ್ಮ ಕೃಷಿ ನಿರ್ವಹಣೆಗಾಗಿ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಹಾಗೂ ಜೀವಾಮೃತವನ್ನು ತಾವೇ ತಯಾರಿಸಿ ಬಳಸುತ್ತಿದ್ದಾರೆ.
- ಮನೋಹರರವರು ಬಿ.ಎ ಪಧವಿಧರರಾಗಿದ್ದು, ಕೃಷಿಯನ್ನೇ ಅವಲಂಭಿಸಿದ್ದಾರೆ. ಹಾಗೂ ಕೃಷಿ ಪದ್ಧತಿಯಲ್ಲಿ ಹನಿನೀರಾವರಿಯನ್ನು ಅಳವಡಿಸಿದ್ದಾರೆ. ಇಂಗುಗುಂಡಿಗಳ ನಿರ್ಮಾಣ ಮಾಡಿ ನೀರು ಮತ್ತು ಮಣ್ಣಿನ ಸಂರಕ್ಷಣೆ ಮಾಡಿದ್ದಾರೆ.
- ಕೃಷಿ ಬೆಳೆ ಬೆಳೆಯುವುದರ ಜೊತೆಗೆ ಇತರ ಪದ್ಧತಿಗಳಾದ ಹೈನುಗಾರಿಕೆ, ಜೇನು ಸಾಕಾಣಿಕೆ, ಸಾವಯವ ಗೊಬ್ಬರ ತಯಾರಿಕೆಯ ಮಾಹಿತಿಯನ್ನು ಇತರರಿಗೂ ಮನಮುಟ್ಟುವಂತೆ ಕೃಷಿಯಲ್ಲಿ ಅಳವಡಿಸಿದ್ದಾರೆ. ಇತರರಿಗೂ ಕೃಷಿಯನ್ನು ಅಳವಡಿಸುವಂತೆ ಮಾದರಿಯ ಯುವ ಕೃಷಿಕರಾಗಿದ್ದಾರೆ.

**ಮೋಹಿನಿ ದುರ್ಗಾ ಖಾರ್ವಿ**



ಹೆಸರು:ಮೋಹಿನಿ ದುರ್ಗಾ ಖಾರ್ವಿ
ಗ್ರಾಮ:ಗೊರಟೆ
ತಾಲೂಕು:ಭಟ್ಕಳ
ಜಿಲ್ಲೆ:ಉತ್ತರಕನ್ನಡ
ಮೊ ನಂ:

**ವಿಶೇಷ ಸಾಧನೆಗಳು:–**

- ಬಿಕಾಂ ಕಲಿತು ಕೃಷಿಗೆ ಬಂದಿರುವ ಈ ಮಹಿಳೆ ಮೂರು ಎಕರೆಯಲ್ಲಿ ಅಡಿಕೆ, ತೆಂಗು, ಬಾಳೆ, ಮೆಣಸು, ಮಾವು, ತರಕಾರಿ, ಅಲಂಕಾರಿಕ ಸಸ್ಯಗಳನ್ನು ಬೆಳೆಸಿದ್ದಾರೆ.
- ಸಮುದ್ರ ಮೀನುಗಾರಿಕೆ ಹೊಂದಿರುವ ಇವರು, ಕೃಷಿ ಅರಣ್ಯವನ್ನು ಸಹ ಹೊಂದಿದ್ದಾರೆ.
- ಸಾವಯುವ ಕೃಷಿ ನಂಬಿರುವ ಇವರು ಜೈವಿಕ ಗೊಬ್ಬರಗಳನ್ನು ಬಳಸುತ್ತಾರೆ.
- ಕೃಷಿ ಯಂತ್ರೋಪಕರಣಗಳನ್ನಾದ ಸಿಂಪರಕಗಳು, ಧಾನ್ಯ ಸಂಸ್ಕರಣಾ ಉಪಕರಣ ಹೊಂದಿದ್ದಾರೆ.
- ವಿದ್ಯಾವಂತರಾದ ಇವರು ಕೃಷಿ ಆಸಕ್ತಿಯನ್ನು ಸುತ್ತಲಿನ ಯುವಕ ಯುವತಿಯರು ನೋಡಿ ಅನುಸರಿಸುತ್ತಿದ್ದು ಗ್ರಾಮದಲ್ಲೇ ಉಳಿದು ಕೃಷಿಯನ್ನು ಮಾಡಲು ನಿಶ್ಚಯಿಸಿದ್ದಾರೆ.

**ಪೂರ್ಣಿಮಾ ಸುರೇಶ ಹೆಗಡೆ**



ಹೆಸರು:  ಪೂರ್ಣಿಮಾ ಸುರೇಶ ಹೆಗಡೆ
ಗ್ರಾಮ:  ಮಂಚಿಕೇರೆ
ತಾಲೂಕು: ಯಲ್ಲಾಪುರ
ಜಿಲ್ಲೆ: ಉತ್ತರಕನ್ನಡ
ಮೊ ನಂ:9481049812

**ವಿಶೇಷ ಸಾಧನೆಗಳು:–**

- ಎರಡು ಎಕರೆ ಭೂಮಿಯನ್ನು ನಂಬಿಕೊಂಡ ಪೂರ್ಣಿಮಾ ರವರು ಅಲ್ಲಿ ಅಡಿಕೆ, ಬಾಳೆ, ಮಾವು, ಅರಿಶಿಣ, ಕಾಳುಮೆಣಸು, ತೆಂಗು, ಭತ್ತ, ಉದ್ದು, ಅಲಸಂಧಿ, ಔಷಧಿ ಸಸ್ಯಗಳನ್ನು ಬೆಳೆದಿದ್ದಾರೆ.
- ಮಣ್ಣಿನ ಫಲವತ್ತತೆಗಾಗಿ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಎರೆಹುಳು ಗೊಬ್ಬರ, ರೈಜೋಬಿಯಂ, ಅಜೆಟೋ ಟ್ಯಾಕ್ಟರಗಳನ್ನು ಬಳಸುತ್ತಿದ್ದು ಜೈವಿಕ ಅನಿಲ ಘಟಕವನ್ನು ಹೊಂದಿದ್ದಾರೆ.
- ಎರಡು ಆಕಳು, ಎರಡು ಕೋಣಗಳನ್ನು ಸಾಕಿ ಸಾವಯುವ ಕೃಷಿಗೆ ಕೈಜೋಡಿಸಿದ್ದಾರೆ.
- ಮಳೆ ನೀರಿನ ಕೊಯ್ಲಿಗಾಗಿ 2 ಕೃಷಿ ಹೊಂಡ ಹೊಂದಿರುವ ಇರುವ ನೀರಿನ ಸಮರ್ಪಕ ಬಳಕೆ ಮಾಡುತ್ತಿದ್ದಾರೆ.
- ಇವರ ವಾರ್ಷಿಕ ಒಟ್ಟು ಆದಾಯ 4.34 ಲಕ್ಷ ವಾಗಿದ್ದು ನೆಮ್ಮದಿಯ ಬದುಕನ್ನು ಕಟ್ಟಿಕೊಂಡಿದ್ದಾರೆ.

# ಸಂತೋಷ ಗಣಪತಿ ನಾಯ್ಕ




ಹೆಸರು: ಸಂತೋಷ ಗಣಪತಿ ನಾಯ್ಕ
ಗ್ರಾಮ: ಕಲಕರಡಿ
ತಾಲೂಕು: ಶಿರಸಿ
ಜಿಲ್ಲೆ: ಉತ್ತರ ಕನ್ನಡ
ಮೊ ನಂ:9900969307

**ವಿಶೇಷ ಸಾಧನೆಗಳು:–**

- ಎಂ.ಎ ಜರ್ನಾಲಿಸ್ಟ ಮಾಡಿರುವ ಸಂತೋಷರವರು ಕೃಷಿಯಲ್ಲಿ ಸಂತೋಷ ಕಂಡಿದ್ದಾರೆ
- 10 ಎಕರೆ ಜಮೀನು ಹೊಂರಿರುವ ಇವರು ತೋಟಗಾರಿಕೆ ಬೆಳೆಗಳಾದ ಶುಂಠಿ, ಮೆಣಸು ಬೀನ್ಸ, ಅಡಿಕೆಯನ್ನು ಬೆಳೆಯುತ್ತಿದ್ದು ಕೃಷಿಯಲ್ಲಿ ಭತ್ತ, ಅಲಸಂಧಿ, ಜೋಳ ವನ್ನು ಬೆಳೆಯುತ್ತಿದ್ದಾರೆ.
- ಸಾವಯುವ ಕೃಷಿಗೆ ಒತ್ತು ಕೊಟ್ಟಿರುವ ಇವರು ಕೊಟ್ಟಿಗೆ ಗೊಬ್ಬರ, ಕೋಳಿ, ಕುರಿ, ಹಸಿರೆಲೆ, ಎರೆಹುಳು ಗೊಬ್ಬರಗಳನ್ನು ಬಳಸುತ್ತಿದ್ದಾರೆ.
- ಟ್ರೆಂಚ್ ಮೂಲಕ ಅಡಿಕೆ, ಬಾಳೆ ಮಾಡಿರುವ ಇವರು ಸರಾಸರಿ 6 ಬಾರಿ ಬಾಳೆಯನ್ನು ಕೂಳೆ ಬೆಳೆಯಿಂದ ತೆಗೆಯುವುದು ವಿಶೇಷ ಹಾಗೂ ಈ ತಂತ್ರಜ್ಞಾನವನ್ನು ಸುತ್ತಲಿನ ರೈತರು ಸಹ ಅಳವಡಿಸಿಕೊಂಡಿರುವುದು ಗಮನಾರ್ಹ.

## ವಿಜಯ ಕುಮಾರ ಗಣೇಶ ಅಡಿ



ಹೆಸರು: ವಿಜಯ ಕುಮಾರ ಗಣೇಶ ಅಡಿ
ಗ್ರಾಮ: ಅಂದ್ಲೆ
ತಾಲೂಕು: ಅಂಕೋಲಾ
ಜಿಲ್ಲೆ: ಕಾರವಾರ
ಮೊ ನಂ:9448236485

**ವಿಶೇಷ ಸಾಧನೆಗಳು:–**

- ಒದಿ ಪಟ್ಟಣ ಸೇರುವ ದಿನಗಳಲ್ಲಿ ವಿಜಯಕುಮಾರವರು ಹಳ್ಳಿಯಲ್ಲೇ ಕೃಷಿ ಮುಂದುವರಿಸಿವುದು ಗಮಗಾರ್ಹ
- ಅಡಿಕೆ, ತೆಂಗು, ಗೇರು, ಮಾವು, ಬಾಳೆ, ಬೆಳೆದ ಇವರು ಭತ್ತ, ಸಾಗುವಾನಿ, ಅಕೇಶಿಯಾ, ಹಲಸು ಗಳನ್ನು ಸಹ ಸಮೃದ್ಧವಾಗಿ ಬೆಳೆಸಿದ್ದಾರೆ.
- ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ ಹೆಚ್ಚಿಸಲು ಕೊಟ್ಟಿಗೆ ಗೊಬ್ಬರ, ಅಜೋಸ್ಪಿರಿಲಂ, ಕಖಃ ಟ್ರೈಕೋಡರ್ಮಾ ಗಳನ್ನು ಬಳಸುತ್ತಿದ್ದಾರೆ.
- ಆಳು ಸಮಸ್ಯೆ ಕಡಿಮೆಮಾಡಲು ಕೃಷಿ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ.
- 7.66 ಲಕ್ಷ ವಾರ್ಷಿಕ ಆದಾಯವಿರುವ ಇರುವ ಕೃಷಿಯಲ್ಲಿ ಸಂತೃಪ್ತಿ ಹೊಂದಿದ್ದಾರೆ.

**ಶ್ರೇಷ್ಠ ಯುವ ಕೃಷಿಕ**



ಹೆಸರು: ಆದಿತ್ಯ ನಾಗೇಶ ನಾಯ್ಕ

ಊರು: ಗುಡಿ ಅಂಗಡಿ

ತಾಲೂಕ: ಕುಮಟಾ

ಜಿಲ್ಲೆ: ಉತ್ತರ ಕನ್ನಡ

ಮೊ: 9449235541

**ವಿಶೇಷ ಸಾಧನೆಗಳು :**

- ಡಿಪ್ಲೊಮಾ(ಮೆಕ್ಯಾನಿಕಲ್) ಪದವಿಧರರಾದ ಆದಿತ್ಯ ನಾಗೇಶ ನಾಯ್ಕ ಕೃಷಿಯಲ್ಲಿ ಸಕ್ರೀಯವಾಗಿದ್ದಾರೆ
- ಒಟ್ಟು 2 ಎಕರೆ ಸ್ವಂತ ಕ್ಷೇತ್ರ ಹಾಗೂ 1 ಎಕರೆ ಗುತ್ತಿಗೆ ಕ್ಷೇತ್ರದಲ್ಲಿ ಭತ್ತ, ಶೇಂಗಾ, ಉದ್ದು, ಹೆಸರು ಕೃಷಿಯಾಗಿ ಹಾಗೂ ತೋಟಗಾರಿಕೆ ಬೆಳೆಗಳಾಗಿ ಅಡಿಕೆ, ತೆಂಗು ಬೆಳೆಯುತ್ತಿದ್ದಾರೆ.
- ಸಾವಯುವ ಕೃಷಿ ಹಾಗೂ ಜೈವಿಕ ಪೀಡೆನಾಶಕಗಳನ್ನು ಬಳಸುತ್ತಿದ್ದಾರೆ.
- ಹೈನುಗಾರಿಕೆಯಲ್ಲಿ ತೊಡಗಿದ್ದು 3 ಆಕಳು ಹಾಗೂ 2 ಎಮ್ಮೆಯಿಂದ ಆದಾಯ ಗಳಿಸುತ್ತಿದ್ದಾರೆ. 2 ಎತ್ತುಗಳು ಸಾಗುವಳಿಗೆ ಸಹಾಯಕಾರಿಯಾಗಿವೆ.
- ಕೃಷಿಗೆ ಕೂಲಿ ಆಳುಗಳ ಕೊರತೆ ಮನಗಂಡು ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಭತ್ತದ ನಾಟಿಗೆ ಯಂತ್ರದ ಬಳಕೆ, ಕಳೆ ತೆಗೆಯುವ ಯಂತ್ರಗಳು, ಪವರ್ ಟಿಲ್ಲರ, ಸಿಂಪರಕಗಳನ್ನು ಬಳಸುತ್ತಾರೆ.
- ತೆಂಗಿನ ಕಾಯಿಯಿಂದ ತೆಂಗಿನ ಎಣ್ಣೆ ತೆಗಯುತ್ತಾರೆ.

**ಶ್ರೇಷ್ಠ ಯುವ ಕೃಷಿಕ**



ಹೆಸರು: ಸಂಜಯ ನಾರಾಯಣ ಭಟ್ಟ

ಊರು: ಲಿಂಗದಬೈಲ್

ತಾಲೂಕ: ಯಲ್ಲಾಪುರ

ಜಿಲ್ಲೆ: ಉತ್ತರ ಕನ್ನಡ

ಮೊ: 9449648431

**ವಿಶೇಷ ಸಾಧನೆಗಳು :**

- ಬಿ.ಕಾಂ ವಿದ್ಯಾಭ್ಯಾಸ ಪೂರೈಸಿ ತಮ್ಮ ಕುಟುಂಬ ಸದಸ್ಯರೊಂದಿಗೆ ಕೃಷಿಯಲ್ಲಿ ತೊಡಗಿದ್ದಾರೆ.
- ಒಟ್ಟು 4 ಎಕರೆ ತೋಟವನ್ನು ಹೊಂದಿದ್ದು, ಸಂಪೂರ್ಣ ಕ್ಷೇತ್ರ ನೀರಾವರಿ ಸೌಲಭ್ಯ ಹೊಂದಿದೆ.
- ಅಡಿಕೆ ಆಧಾರಿತ ಬಹು ಮಹಡಿ ಪದ್ಧತಿಯಲ್ಲಿ ಕಾಳು ಮೆಣಸು, ಕೊಕೊ, ಜಾಯಿಕಾಯಿ, ಬಾಳೆ ಹೀಗೆ ಹಲವು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಕೃಷಿಯ ಜೊತೆಗೆ ಹೈನುಗಾರಿಕೆಗೆ ಪ್ರಾಮುಖ್ಯತೆ ನೀಡಿದ್ದಾರೆ. ಇವರಲ್ಲಿ 8 ಮಿಶ್ರ ತಳಿ ಹಿಂಡುವ ಹಸುಗಳಿದ್ದು ದಿನಕ್ಕೆ 70 ಲೀ. ಹಾಲಿನ ಉತ್ಪಾದನೆ ಮಾಡುತ್ತಾ ವರ್ಷಕ್ಕೆ ಸುಮಾರು 5,00,000 ವರೆಗೆ ಆದಾಯಗಳಿಸಿದ್ದಾರೆ.
- ಹೈನುಗಾರಿಕೆ ಅನುಕೂಲವಾಗುವಂತೆ ವಿವಿಧ ಜಾತಿಯ ಹುಲ್ಲಿನ ಬೆಳೆಗಳನ್ನು ತೋಟದಲ್ಲಿ ಬೆಳೆಯುತ್ತಿದ್ದಾರೆ ಅಲ್ಲದೇ ಹಾಲು ಕರೆಯಲು ಯಂತ್ರವನ್ನು ಬಳಸುತ್ತಾರೆ.
- ಇವರ ವೈಜ್ಞಾನಿಕ ಹೈನುಗಾರಿಕೆ ಉಳಿದ ಯುವಕರಿಗೆ ಉತ್ತೇಜನಕಾರಿಯಾಗಿದ್ದು ಅವರೂ ಕೂಡ ಹೈನುಗಾರಿಕೆಯನ್ನು ಅಳವಡಿಸಿಕೊಂಡಿದ್ದಾರೆ.
- ಕೃಷಿ, ಹೈನುಗಾರಿಕೆ, ಕೃಷಿ ಅರಣ್ಯ ಬೆಳೆಗಳು ಹೀಗೆ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಕೃಷಿಯಲ್ಲಿ ಹೆಚ್ಚಿನ ಆದಾಯಗಳಿಸುತ್ತಿದ್ದಾರೆ.

## ಶ್ರೇಷ್ಠ ಯುವ ಕೃಷಿಕ



ಹೆಸರು: ಗಣೇಶ ಹನುಮಂತ ನಾಯ್ಕ

ಊರು: ಹಾರುಮುಲ್ಲಾ, ಕೋಡಾಣಿ

ತಾಲೂಕ: ಹೊನ್ನಾವರ

ಜಿಲ್ಲೆ: ಉತ್ತರ ಕನ್ನಡ

ಮೊ: 9483669242

**ವಿಶೇಷ ಸಾಧನೆಗಳು :**

- ಗಣೇಶ ನಾಯ್ಕ ಇವರು 5 ಎಕರೆ ಕ್ಷೇತ್ರವನ್ನು ಹೊಂದಿದ್ದು, ಕೃಷಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಭತ್ತದ ನಂತರ ಉದ್ದು ಹಾಗೂ ತರಕಾರಿಗಳನ್ನು ಬೆಳೆಯುತ್ತಾರೆ.
- ಅಡಿಕೆ, ತೆಂಗು, ಜಾಯಿಕಾಯಿ, ಕಾಳು ಮೆಣಸು, ಬಾಳೆ ಪ್ರಮುಖ ತೋಟಗಾರಿಕೆ ಬೆಳೆಗಳು
- ಸಾವಯವ ಗೊಬ್ಬರ ಹಾಗೂ ಜೈವಿಕ ಪೀಡೆನಾಶಕಗಳನ್ನು ಬಳಸುತ್ತಾರೆ.
- ಹೈನುಗಾರಿಕಯಲಲಿ 4 ಹಸು ಹಾಗೂ 01 ಎಮ್ಮೆಯನ್ನು ಹೊಂದಿದ್ದಾರೆ.

## **ಶ್ರೇಷ್ಠ ಯುವ ಕೃಷಿಕ**



ಹೆಸರು: ಗಣೇಶ ರತ್ನಾಕರ ನಾಯ್ಕ

ಊರು: ಕುಚ್ಚೆಗಾರ, ಘಾಡ್ಸೈ

ತಾಲೂಕ: ಕಾರವಾರ

ಜಿಲ್ಲೆ: ಉತ್ತರ ಕನ್ನಡ

ಮೊ: 94499992834

**ವಿಶೇಷ ಸಾಧನೆಗಳು :**

- ಅಷ್ಟೇನು ಓದದ ಗಣೇಶ ರತ್ನಾಕರ ನಾಯ್ಕ ಇವರು 3 ಎಕರೆ ಸ್ವಂತ ಕ್ಷೇತ್ರ ಹೊಂದಿದ್ದು, 2 ಎಕರೆ ನೀರಾವರಿ ಹಾಗೂ 1 ಎಕರೆಯಲ್ಲಿ ಒಣ ಬೇಸಾಯ ಮಾಡುತ್ತಾರೆ.
- ಶ್ರೀ ಪದ್ಧಾತಿಯಲ್ಲಿ ಭತ್ತ, ಅಡಿಕೆ, ತೆಂಗು, ಗೇರು ಬೆಳೆಗಳನ್ನು ಬೆಳೆಯುತ್ತಾರೆ.
- ಕೃಷಿ ಹೊಂಡವನ್ನು ಹೊಂದಿದ್ದು, ಅದರಲ್ಲಿ ಮೀನುಗಾರಿಕೆ ಹಾಗೂ ಬಾತುಕೋಳಿ ಸಾಕಾಣಿಕೆ ಮಾಡಿ ಆದಾಯ ಗಳಿಸುತ್ತಿದ್ದಾರೆ.
- ಹೈನುಗಾರಿಕೆಯಲ್ಲಿ ಸಕ್ರೀಯರಾಗಿದ್ದು ಹೆಚ್.ಎಫ್. ಹಾಗೂ ಜರ್ಸಿ ತಳಿಯ 12 ಹಸುಗಳನ್ನು ಹೊಂದಿದಾರೆ.
- ಸಂಪೂರ್ಣ ಸಾವಯವ ಕೃಷಿಕರಾಗಿದ್ದು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ

## ಶ್ರೇಷ್ಠ ಯುವ ಕೃಷಿ ಮಹಿಳೆ



ಹೆಸರು: ಅಕ್ಷತಾ ಉಲ್ಲಾಸ ನಾಯ್ಕ

ಊರು: ಹಳವಳ್ಳಿ

ತಾಲೂಕ: ಅಂಕೋಲಾ

ಜಿಲ್ಲೆ: ಉತ್ತರ ಕನ್ನಡ

ಮೊ: 9483939877

**ವಿಶೇಷ ಸಾಧನೆಗಳು :**

- ಎಸ್.ಎಸ್.ಎಲ್.ಸಿ ಓದಿದ್ದು ಅವಿಭಕ್ತ ಕುಟುಂಬದಲ್ಲಿ ಕೃಷಿಯಲ್ಲಿ ಸಕ್ರೀಯವಾಗಿದ್ದಾರೆ.
- 5 ಎಕರೆ ನೀರಾವರಿ ಕ್ಷೇತ್ರದಲ್ಲಿ ಅಡಿಕೆ ಆಧಾರಿತ ಮಿಶ್ರ ಬೆಳೆ ಇವರ ಮುಖ್ಯ ಕೃಷಿ.
- ಕೃಷಿ ಅರಣ್ಯಕ್ಕೆ ಹೆಚ್ಚಿನ ಒಲವು ತೋರಿದ್ದು ಬದುಗಳ ಸುತ್ತಲೂ ಹಾಗೂ ಬೆಟ್ಟದಲ್ಲಿ ಹಲಸು, ಮಾವು, ಗೇರು, ಅಕೇಷಿಯಾ, ಗೊಬ್ಬರ ಗಿಡ ಬೆಳೆಸಿದ್ದಾರೆ.
- ವಾಟೆ, ಮುರುಗಲು ಮರಗಳನ್ನು ಇವರ ತೋಟದಲ್ಲಿ ಕಾಣಬಹುದು.
- ಕೃಷಿಯೊಂದಿಗೆ ಕೃಷಿಗೆ ಪೂರಕವಾದ ಕೋಳಿ ಸಾಕಾಣಿಕೆ, ಜೇನು ಕೃಷಿ, ಹೈನುಗಾರಿಕೆ, ಪುಷ್ಪ ಕೃಷಿಗಳನ್ನು ಮಾಡುತ್ತಾರೆ.
- ತೋಟಕ್ಕೆ ಸಾಧ್ಯವಾದಷ್ಟು ಸಾವಯವ ಪರಿಕರಗಳನ್ನು ಬಳಸುತ್ತಾರೆ.
- ಗೃಹಿಣಿಯಾಗಿ ಆರೋಗ್ಯಕರ ತರಕಾರಿಗಳನ್ನು ಮನೆಯಂಗಳದಲ್ಲೇ ಬೆಳೆಯುತ್ತಾರೆ.
- ತೆಂಗಿನ ಕಾಯಿಯಿಂದ ತೆಂಗಿನ ಎಣ್ಣೆ ತೆಗೆಯುವುದು, ಕೆಂಪಡಿಕೆ ತಯಾರಿಕೆ, ಹಲಸಿನ ಉತ್ಪನ್ನಗಳ ತಯಾರಿಕೆ, ಕೋಕಂ ಮೌಲ್ಯವರ್ಧನೆ ಹೀಗೆ ಕೊಯ್ಲೋತ್ತರ ತಂತ್ರಜ್ಞಾನಕ್ಕೂ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ.

## ಶ್ರೇಷ್ಠ ಯುವ ಕೃಷಿ ಮಹಿಳೆ



ಹೆಸರು: ಪವಿತ್ರಾ ಸತೀಶ ಗೌಡ

ಊರು: ಕಲ್ಲಕೊಪ್ಪ  ಪೋ: ಬಾಶಿ

ತಾಲೂಕ: ಶಿರಸಿ

ಜಿಲ್ಲೆ: ಉತ್ತರ ಕನ್ನಡ

ಮೊ: 9731702885

**ವಿಶೇಷ ಸಾಧನೆಗಳು :**

- 15 ಎಕರೆ ನೀರಾವರಿ ಕ್ಷೇತ್ರದಲ್ಲಿ ಅಡಿಕೆ ಆಧಾರಿತ ಮಿಶ್ರ ಬೆಳೆ ಹಾಗೂ ಭತ್ತ ಇವರ ಮುಖ್ಯ ಕೃಷಿ.
- ಭತ್ತದ ಪ್ರಧಾನತೆಯಲ್ಲಿ ಶುಂಠಿಯನ್ನು ಉಪಬೆಳೆಯಾಗಿ ಬೆಳೆಯುತ್ತಾರೆ.
- ಕೃಷಿಯೊಂದಿಗೆ ಕೃಷಿಗೆ ಪೂರಕವಾದ ಹೈನುಗಾರಿಕೆ ಹೊಂದಿದ್ದು 6 ಎಮ್ಮೆ ಹಾಗೂ 1 ಮಿಶ್ರ ತಳಿ ಆಕಳನ್ನು ಹೊಂದಿದ್ದಾರೆ.
- ತೋಟ ಹಾಗೂ ಗದ್ದೆಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡುತ್ತ ಕೃಷಿಯಲ್ಲಿ ಉತ್ತಮ ಇಳುವರಿ ಹಾಗೂ ಆದಾಯ ಪಡೆಯುತ್ತಿದ್ದಾರೆ.
- ನೀರಿನ ನಿರ್ವಹಣೆ ಹಾಗೂ ಮಣ್ಣಿನ ಸಂರಕ್ಷಣೆ ಸೂಕ್ತ ಮಾರ್ಗಗಳನ್ನು ಅನುಸರಿಸುತ್ತಾರೆ.
- ಸಮಗ್ರ ಕೃಷಿ ಪದ್ಧತಿಯ ಅಳವಡಿಕೆ ಇವರ ಕೃಷಿ ಯಶಸ್ಸಿನ ಗುಟ್ಟು.

## ಶ್ರೇಷ್ಠ ಯುವ ಕೃಷಿ ಮಹಿಳೆ



ಹೆಸರು: ಕವಿತಾ ಶಿವರಾಂ ಭಟ್ಟ

ಊರು: ಹೊಲನಗದ್ದೆ, ಪೋ: ಮಾಸ್ತಿಕಟ್ಟಾ

ತಾಲೂಕ: ಕುಮಟಾ

ಜಿಲ್ಲೆ: ಉತ್ತರ ಕನ್ನಡ

ಮೊ: 9448575990

**ವಿಶೇಷ ಸಾಧನೆಗಳು :**

- 1.5 ಎಕರೆ ಒಣ ಬೇಸಾಯ ಹಾಗೂ 3.5 ಎಕರೆ ನೀರಾವರಿ ಕ್ಷೇತ್ರದಲ್ಲಿ ಅಡಿಕೆ ಆಧಾರಿತ ಮಿಶ್ರ ಬೆಳೆ ಹಾಗೂ ಭತ್ತ,ಶೇಂಗಾ, ಉದ್ದು, ಜೋಳ, ಅಲಸಂದೆ ಕೃಷಿ ಕೈಗೊಳ್ಳುತ್ತಾರೆ.
- ಕೃಷಿ ಅರಣ್ಯದಲ್ಲಿ ಗೇರು, ಕೋಕಂ ಪ್ರಮುಖವಾದುವುಗಳು
- ಕೃಷಿಯಲ್ಲಿ ಆಳುಗಳ ಕೊರತೆ ತಪ್ಪಿಸಲು ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಪವರ ಟಿಲ್ಲರ, ಭತ್ತದ ನಾಟಿ ಯಂತ್ರದ ಬಳಕೆ, ಕಳೆ ಯಂತ್ರಗಳ ಬಳಕೆ, ಒಕ್ಕಣೆ ಯಂತ್ರದ ಬಳಕೆ ಮಾಡುತ್ತಾರೆ.
- ತೋಟಕ್ಕೆ ಎರೆಹುಳು ಗೊಬ್ಬರ, ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಬಳಸುತ್ತಾರೆ. ಟ್ರೈಕೊಡರ್ಮಾ,ಪಿ.ಎಸ್.ಬಿ ಹಾಗೂ ರೈಜೋಬಿಯಂ ಬಳಕೆ ಮಾಡುತ್ತಾರೆ.

**ಶ್ರೇಷ್ಠ ಯುವ ಕೃಷಿ ಮಹಿಳೆ**



ಹೆಸರು: ಸವಿತಾ ಆನಂದ ನಾಯ್ಕ

ಊರು: ಹಾಮಕ್ಕಿ, ಪೋ: ಬಳಕೂರ

ತಾಲೂಕ: ಹೊನ್ನಾವರ

ಜಿಲ್ಲೆ: ಉತ್ತರ ಕನ್ನಡ

ಮೊ: 9341072226

**ವಿಶೇಷ ಸಾಧನೆಗಳು :**

- 3 ಎಕರೆ ಒಣ ಬೇಸಾಯ ಹಾಗೂ 2 ಎಕರೆ ನೀರಾವರಿ ಕ್ಷೇತ್ರದಲ್ಲಿ ಅಡಿಕೆ ಆಧಾರಿತ ಮಿಶ್ರ ಬೆಳೆ ಹಾಗೂ ಭತ್ತ, ತರಕಾರಿ ಕೃಷಿ ಕೈಗೊಳ್ಳುತ್ತಾರೆ.
- ಕೃಷಿ ಅರಣ್ಯದಲ್ಲಿ ಗೇರು, ಕೋಕಂ,ಹಲಸು ಪ್ರಮುಖವಾದುವುಗಳು
- ತೋಟಕ್ಕೆ ಎರೆಹುಳು ಗೊಬ್ಬರ, ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಬಳಸುತ್ತಾರೆ. ಟ್ರೈಕೊಡರ್ಮಾ,ಪಿ.ಎಸ್.ಬಿ ಹಾಗೂ ರೈಜೋಬಿಯಂ ಬಳಕೆ ಮಾಡುತ್ತಾರೆ.
- ಹೈನುಗಾರಿಕೆಯನ್ನು ಮಾಡುತ್ತಾರೆ
- ತನ್ನ ಪತಿಯೊಂದಿಗೆ ಕೃಷಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ

**ಶ್ರೇಷ್ಠ ಯುವ ಕೃಷಿ ಮಹಿಳೆ**

ಹೆಸರು: ಭಾಗೀರತಿ ಪಾಂಡುರಂಗ ಜೋಷಿ

ಊರು: ಆಮದಳ್ಳಿ ಪೋ: ಬಾಡ

ತಾಲೂಕ: ಕಾರವಾರ

ಜಿಲ್ಲೆ: ಉತ್ತರ ಕನ್ನಡ

ಮೊ: 9343152219

**ವಿಶೇಷ ಸಾಧನೆಗಳು :**

- 5 ಎಕರೆ ಒಣ ಬೇಸಾಯ ಹಾಗೂ 1 ಎಕರೆ ನೀರಾವರಿ ಕ್ಷೇತ್ರದಲ್ಲಿ ತೆಂಗು ಆಧಾರಿತ ಮಿಶ್ರ ಬೆಳೆ ಹಾಗೂ ಭತ್ತ, ತರಕಾರಿ ಕೃಷಿ ಕೈಗೊಳ್ಳುತ್ತಾರೆ.
- ಶ್ರೀ ಪದ್ಧತಿಯಲ್ಲಿ ಭತ್ತದ ಕೃಷಿ ಇವರ ವಿಶೇಷತೆ.
- ಕೃಷಿ ಅರಣ್ಯದಲ್ಲಿ ಹಲಸು, ಸಾಗವಾನಿ ಬೆಳೆಸಿದ್ದಾರೆ
- ತೋಟಕ್ಕೆ ಎರೆಹುಳು ಗೊಬ್ಬರ, ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರಗಳನ್ನು ಬಳಸುತ್ತಾರೆ. ಟ್ರೈಕೊಡರ್ಮಾ,ಪಿ.ಎಸ್.ಬಿ ಹಾಗೂ ರೈಜೋಬಿಯಂ ಬಳಕೆ ಮಾಡುತ್ತಾರೆ.
- ಜರ್ಸಿ ಹಸುಗಳೊಂದಿಗೆ ಹೈನುಗಾರಿಕೆಯನ್ನು ಮಾಡುತ್ತಾರೆ.
- ಜೈವಿಕ ಅನಿಲ ಘಟಕ, ರಸಮೇವು ತಯಾರಿಕಾ ತೊಟ್ಟಿ ಹೊಂದಿದ್ದು ತೋಟಕ್ಕೆ ಬೇಕಾಗುವ ಕೊಟ್ಟಿಗೆ ಗೊಬ್ಬರಗಳನ್ನು ಉತ್ಪಾದಿಸುತ್ತಾರೆ
- ತನ್ನ ಪತಿಯೊಂದಿಗೆ ಕೃಷಿಯಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ